*M.V.C.No. 609-610/2023*
*PW:02*

**ಸಾಕ್ಷಿಯನ್ನು ದಿಃ *25/06/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ಶ್ರೀ ಎಸಜಿಪಿ ವಕೀಲರಿಂದ 2 ನೇ ಎದುರುದಾರರ** ಪರವಾಗಿ.

ಅಪಘಾತ ದಿನದಂದು ನಾನು ಮೋಟಾರುಸೈಕಲ ನಾನೇ ಚಾಲನೆ ಮಾಡುತ್ತಿದ್ದೆ. ಸದರಿ ಮೋಟಾರುಸೈಕಲ ನನ್ನ ಅಣ್ಣನಾದ ಮುತ್ತಪ್ಪನ ಮಾಲೀಕತ್ವಕ್ಕೆ ಸಂಬಂಧಿಸಿದ್ದು ಎಂದರೆ ನಿಜ. ಸದರಿ ಮಾಲೀಕನಾದ ಮುತ್ತಪ್ಪ ತನ್ನ ವಾಹನಕ್ಕೆ ಸೂಕ್ತವಾದ ವಿಮೆ ಇರುವುದಿಲ್ಲ ಮತ್ತು ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಪತ್ರವಿಲ್ಲ ಎಂದು ನೋಟೀಸಿಗೆ ಪ್ರತ್ಯೂತ್ತರ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಾವು ಮೋಟಾರುಸೈಕಲ ಮೇಲೆ ಬರುತ್ತಿರುವಾಗ ಕಾರಿನ ಚಾಲಕ ಅಪಘಾತ ಪಡಿಸಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ತಪ್ಪಿನಿಂದ ಆಗಿದೆ ಹೊರತು ಕಾರಿನ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ನಾವು ಇಬ್ಬರೂ ಹೆಲ್ಮೇಟ ಹಾಕಿರಲಿಲ್ಲ ಎಂದರೆ ನಿಜ. ಸದರಿ ಅಪಘಾತ ರಸ್ತೆಯ ಮೇಲೆ ಮುಖಾಮುಖಿ ಆಗಿರುತ್ತದೆ ಎಂದರೆ ನಿಜ. ಸದರಿ ಅಪಘಾತದ ಕುರಿತು ಪ್ರಕಾಶ ಕುರಿ ದೂರು ನೀಡಿರುತ್ತಾರೆ ಎಂದರೆ ನಿಜ. ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದು ಗೊತ್ತಿದ್ದರೂ ಸಹ ಕಾರ ಚಾಲಕನ ತಪ್ಪಿನಿಂದ ಆಗಿದೆ ಎಂದು ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ.

ಅಪಘಾತದ ನಂತರ ನಾನು ಬಾಗಲಕೋಟಿಯ ವಾಸನಡ ಆಸ್ಪತ್ರೆಯಲ್ಲಿ ಒಳರೋಗಿಯಾಗಿ 5 ಬಾರಿ ಚಿಕಿತ್ಸೆ ಪಡೆದುಕೊಂಡು, ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿರುವ ವಿಷಯ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಗಾಯದ ಸ್ವರೂಪದ ಕುರಿತು ಬರೆದಿರುವ ವಿಷಯ ಸಂಗತಿ ಸಹ ಸುಳ್ಳು ಇದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವೈದ್ಯಕೀಯ ದಾಖಲೆಗಳು ಸೃಷ್ಠಿ ಮಾಡಿರುವ ಖೊಟ್ಟಿ ದಾಖಲೆಗಳು ಎಂದರೆ ಸರಿಯಲ್ಲ. ಮುಂದುವರೆದ ಚಿಕಿತ್ಸೆಯನ್ನು ಸದರಿ ವಾಸನಡ ಆಸ್ಪತ್ರೆಯಲ್ಲಿ ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹುಬ್ಬಳ್ಳಿ ಧಾರವಾಡದಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ನಿಜ. ಈ ಅಪಘಾತದಿಂದ ನನಗೆ ಶಾಶ್ವತ ಅಂಗನ್ಯೂನತೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಿಕಿತ್ಸೆಗೆ 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇನೆ ಎಂದು ಆಧಾರರಹಿತ ಸಂಗತಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5 ಡಿಸಚಾರ್ಜ ಸಮರಿಯಲ್ಲಿ ನಮೂದಿಸಿರುವ ಗಾಯಗಳಿಗೆ ಮತ್ತು ಅಪಘಾತಕ್ಕೆ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ನಿ.ಪಿ.11 ರಂತೆ ಇರುವ ವೈದ್ಯಕೀಯ ಬಿಲ್ಲುಗಳ ಕ್ರಮಸಂಖ್ಯೆ 1, 3 ಮತ್ತು 5 ರಲ್ಲಿ ನಾವು ಕಟ್ಟಿರುವ ಹಣ ಮುಂಗಡವಿದ್ದು, ಅದನ್ನು ಸೇರಿಸಿ ಸುಳ್ಳು ಲೆಕ್ಕಾಚಾರ ಮಾಡಿದ್ದೇನೆ ಎಂದರೆ ಸರಿಯಲ್ಲ.

ನನಗೆ ಅಪಘಾತದ ಸಮಯದಲ್ಲಿ 35 ವಯಸ್ಸು ಇದ್ದು, ಗ್ರಾಮ ಪಂಚಾಯತಿಯಲ್ಲಿ ಗುತ್ತಿಗೆ ಆಧಾರದ ಮೇಲೆ ನೌಕರನಾಗಿ ಕೆಲಸ ಮಾಡಿ ತಿಂಗಳಿಗೆ 27 ಸಾವಿರ ರೂಪಾಯಿ ದುಡಿಯುತ್ತಿದ್ದೆ ಮತ್ತು ಶೇತ್ಕಿ ಸಹ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಗ್ರಾಮ ಪಂಚಾಯತಿಯಲ್ಲಿ ಇವತ್ತಿಗೂ ಸಹ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಕಾರಣ ಸದರಿ ಗ್ರಾಮ ಪಂಚಾಯತಿ ನನಗೆ ಕೆಲಸ ಬಿಡಿಸಿದ ಕುರಿತು ದಾಖಲೆ ಹಾಜರುಪಡಿಸಿಲ್ಲ. ಈಗಲೂ ಸದರಿ ಗ್ರಾಮ ಪಂಚಾಯತಿಯಲಿಲ ಅದೇ ಕೆಲಸ ಮುಂದುವರೆಸಿದ್ದು ಇದ್ದರೂ ಸಹ ತೆಗೆದು ಹಾಕಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಾಡುವ ಕೆಲಸ ಸರಕಾರಿ ನೌಕರಿ ಇರುವ ಕಾರಣ ನನ್ನ ವೈದ್ಯಕೀಯ ವೆಚ್ಚಗಳನ್ನು ಸರಕಾರದವರು ಭರಣಾ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ನನಗೆ ಆರ್ಥಿಕ ಅಡಚಣೆಯಾಗಿ ಮತ್ತು ಅಂಗನ್ಯೂನತೆ ಸಹ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಎದುರುದಾರ/ಮಾಲೀಕ/ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಪತ್ರವಿರಲಾರದ ಕಾರಣ 1 ನೇ ಎದುರುದಾರರು ವಿಮೆ ಷರತ್ತು ಉಲ್ಲಂಘನೆ ಮಾಡಿದ್ದು, ಕಾರಣ 2 ನೇ ಎದುರುದಾರರು ಪರಿಹಾರ ಹಣ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ತಪ್ಪಿನಿಂದ ಆಗಿದ್ದರೂ ಸಹ ಪರಿಹಾರ ಹಣ ಪಡೆಯುವ ಸಲುವಾಗಿ ಕಾರು ಚಾಲಕನ ತಪ್ಪಿನಿಂದ ಆಗಿದ ಎಂದು ಸುಳ್ಳು ದೂರು ನೀಡಿ ಅದರಂತೆ ಸುಳ್ಳು ಪ್ರಕರಣದಲ್ಲಿ ಸುಳ್ಳು ಪ್ರಮಾಣಪತ್ರದೊಂದಿಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.